



ಎಂಬುದನ್ನು ಅರಿತುಕೊಳ್ಳಬೇಕು. ಒಂದು ವೇಳೆ ಪ್ಲೇಟ್‌ಲೆಟ್ ಸಂಖ್ಯೆ ಕಡಿಮೆ ಇದ್ದಲ್ಲಿ ದಂತ ಚಿಕಿತ್ಸೆ ಬಳಿಕ ರಕ್ತಸ್ರಾವವಾಗಬಹುದು. ವಿಕಿರಣ ಚಿಕಿತ್ಸೆ ಪಡೆದಿದ್ದಲ್ಲಿ ಹಲ್ಲು ಕಿತ್ತ ಜಾಗದಲ್ಲಿ ಕೀವು ತುಂಬಿ ಗಾಯ ತಿಂಗಳುಗಳ ಕಾಲ ಒಣಗದೇ ಇರಬಹುದು.

## ಅಪಸ್ಮಾರ

ಹಲ್ಲಿನ ಚಿಕಿತ್ಸೆ ನೀಡುವ ಮೊದಲು ರೋಗಿಗಳು ಯಾವುದೇ ಅಪಸ್ಮಾರ ರೋಗದಿಂದ ಬಳಲುತ್ತಿಲ್ಲ ಎಂದು ದೃಢೀಕರಿಸಿಕೊಳ್ಳಬೇಕು. ಅಪಸ್ಮಾರ ರೋಗಿಗಳಗೆ ವಿಶೇಷ ಪರಿಣತ ವೈದ್ಯರಿಂದ ನೋವುರಹಿತ ಚಿಕಿತ್ಸೆ ಅತೀ ಅಗತ್ಯ. ಸಣ್ಣ ನೋವಿದ್ದರೂ ಅಪಸ್ಮಾರ ಬರುವ ಸಾಧ್ಯತೆ ಇರುತ್ತದೆ. ದಂತ ಚಿಕಿತ್ಸೆ ನೀಡುವ ಮೊದಲು ಒತ್ತಡ ನಿವಾರಕ ಔಷಧಿ ನೀಡಲಾಗುತ್ತದೆ.

## ರಕ್ತಸಂಬಂಧಿ ಕಾಯಿಲೆ

ಹಿಮೊಫಿಲಿಯಾ ಅಥವಾ ಕುಸುಮ ರೋಗ ಇರುವ ರೋಗಿಗಳಿಗೆ ಯಾವುದೇ ದಂತ ಚಿಕಿತ್ಸೆ ಮಾಡಬೇಕಾದರೆ ಆಸ್ಪತ್ರೆಯಲ್ಲಿ ದಾಖಲು ಮಾಡಿ ಅವರ ರಕ್ತದ ಗುಂಪನ್ನು ತಿಳಿದು ರಕ್ತದ ವ್ಯವಸ್ಥೆ ಮಾಡಿದ ಬಳಿಕವೇ ಮಾಡಬೇಕಾಗುತ್ತದೆ. ಹಲ್ಲು ಕೀಳುವುದು, ಹಲ್ಲು ಶುಚಿಗೊಳಿಸುವುದು ಇತ್ಯಾದಿಗಳನ್ನು ಆಸ್ಪತ್ರೆಯಲ್ಲಿ ರೋಗಿಯಾಗಿ ದಾಖಲೆ ಮಾಡಿ ಅತೀ ಅನಿವಾರ್ಯವಾದಲ್ಲಿ ಮಾತ್ರ ಮಾಡಲಾಗುವುದು. ಅವರಿಗೆ ಅರಿವಳಿಕೆ ಚುಚ್ಚುಮದ್ದನ್ನು ನೀಡುವಾಗ ಬಹಳ ಜಾಗರೂಕರಾಗಿ ಇರಬೇಕಾಗುತ್ತದೆ.

## ಜ್ವರಗಳ ಚರಿತ್ರೆ

ರೋಗಿಗಳು ಈ ಹಿಂದೆ ಡೆಂಗಿ ಜ್ವರ ಮತ್ತು ಚಿಕುನ್‌ಗುನ್ಯಾ ಜ್ವರದಿಂದ ಬಳಲಿದ್ದಲ್ಲಿ, ಅವರ ರಕ್ತದಲ್ಲಿನ ಪ್ಲೇಟ್‌ಲೆಟ್ ಸಂಖ್ಯೆ ಸರಿಯಾಗಿ ಇದೆಯೇ ಎಂದು ಪರಿಶೀಲಿಸಿ ನಂತರ ಚಿಕಿತ್ಸೆ ನೀಡಬೇಕಾದ ಅನಿವಾರ್ಯತೆ ಇದೆ.

## ವಿರಳ ಕಾಯಿಲೆಗಳು

ಏಡ್ಸ್, ಹೆಪಟೈಟಿಸ್ ಮುಂತಾದ ವೈರಾಣುವಿನಿಂದ ಹರಡುವ ರೋಗಗಳ ಬಗ್ಗೆ ರೋಗಿಗಳಲ್ಲಿ ವಿಚಾರಣೆ ಮಾಡಬೇಕು. ಇಂತಹ ರೋಗದಿಂದ ಬಳಲುತ್ತಿದ್ದಲ್ಲಿ ಯಾವುದೇ ಸೌಂದರ್ಯವರ್ಧಕ ದಂತ ಚಿಕಿತ್ಸೆ ನೀಡುವಂತಿಲ್ಲ. ಅತೀ ಅಗತ್ಯದ ತುರ್ತು ಚಿಕಿತ್ಸೆಗಳನ್ನು ಆಸ್ಪತ್ರೆಗೆ ದಾಖಲು ಮಾಡಿ ಸಕಲ ಪೂರ್ವಸಿದ್ಧತೆಗಳೊಂದಿಗೆ ಮಾತ್ರ ಮಾಡಬೇಕಾಗುತ್ತದೆ.

ಪಾರ್ಶ್ವವಾಯು ರೋಗಿಗಳು, ವಿವಿಧ ಕಾಯಿಲೆಗಾಗಿ ಸ್ಟೀರಾಯ್ಡ್, ಇತರ ಔಷಧಿ ಸೇವಿಸುವ ರೋಗಿಗಳಿಗೆ ದಂತ ಚಿಕಿತ್ಸೆಯನ್ನು ಕಾಯಿಲೆಯ ನಿಯಂತ್ರಣ ನೋಡಿಕೊಂಡು ಮಾಡಬೇಕಾಗುತ್ತದೆ.

## ಮಹಿಳೆಯರ ಕಾಯಿಲೆಗಳು

ಮಹಿಳೆಯರು ಋತು ಚಕ್ರದ ಸಂದರ್ಭದಲ್ಲಿ ಹೆಚ್ಚು ರಕ್ತಸ್ರಾವವಾಗುವ ದಂತ ಸರ್ಜರಿಗಳನ್ನು ಮಾಡಬಾರದು. ಅತೀ ಅಗತ್ಯದ ಚಿಕಿತ್ಸೆ ಮಾತ್ರ ಮಾಡಬಹುದಾಗಿದೆ. ಅಲ್ಲದೆ ಅವರು ಗರ್ಭವತಿಯಾಗಲು ಔಷಧಿ ತೆಗೆದುಕೊಳ್ಳುತ್ತಿದ್ದಲ್ಲಿ ಹೆರಿಗೆ ತಜ್ಞರ ಸಲಹೆ ಮತ್ತು ಮಾರ್ಗದರ್ಶನ ಪಡೆದೇ ದಂತ ಚಿಕಿತ್ಸೆ ಮಾಡತಕ್ಕದ್ದು. ಹೆಚ್ಚಿನ ಮಹಿಳೆಯರು ಗರ್ಭವತಿಯಾಗುವುದನ್ನು ತಡೆಯುವ ಅಧಿಕ ರಸದೂತ ಬಳಸುತ್ತಿದ್ದಲ್ಲಿ ಅದನ್ನೂ ಕೂಡ ಗುರುತಿಸಿ ಪ್ರಸೂತಿ ತಜ್ಞರ ಅನುಮತಿ ಪಡೆದೇ ದಂತ ಚಿಕಿತ್ಸೆ ಮಾಡತಕ್ಕದ್ದು. ಇನ್ನು ಮಹಿಳೆ ಗರ್ಭವತಿಯಾಗಿದ್ದಲ್ಲಿ ಮೊದಲನೇ ಮತ್ತು ಮೂರನೇ ತ್ರೈಮಾಸಿಕದಲ್ಲಿ ಅತೀ ಅಗತ್ಯದ ತುರ್ತು ಚಿಕಿತ್ಸೆ ಮಾಡತಕ್ಕದ್ದು. ಔಷಧಿಗಳನ್ನು ಅತೀ ಅವಶ್ಯಕತೆಯಿದ್ದಲ್ಲಿ ಮಾತ್ರ ಬಳಸತಕ್ಕದ್ದು. ಪ್ಯಾರಾಸಿಟಮಾಲ್ ನೋವು ನಿವಾರಕ ಮತ್ತು ಅಮೋಕ್ಸಿಸಿಲಿನ್ ಆ್ಯಂಟಿಬಯೊಟಿಕ್ ಅತೀ ಸೂಕ್ತ ಎಂದು ಸಾಬೀತಾಗಿದೆ. ಸೌಂದರ್ಯವರ್ಧಕ ಚಿಕಿತ್ಸೆಗಳನ್ನು ಎರಡನೇ ತ್ರೈಮಾಸಿಕದಲ್ಲಿ ಮಾಡಬಹುದಾಗಿದೆ. ದಂತ ಕ್ಷಕಿರಣವನ್ನು ಬಳಸದೇ ಇರುವುದು ಸೂಕ್ತ.

ಥೈರಾಯಿಡ್ ಸಮಸ್ಯೆಗಳು, ಲಿವರ್ ತೊಂದರೆ, ಗ್ಯಾಸ್ಟ್ರಿಕ್ ಸಮಸ್ಯೆ ಇರುವವರಿಗೆ ದಂತ ಚಿಕಿತ್ಸೆ ನೀಡುವುದು ಕಷ್ಟ.

## ಮಾನಸಿಕ ರೋಗಿಗಳು

ರೋಗಿಗಳು ಮಾನಸಿಕ ರೋಗದಿಂದ ಬಳಲುತ್ತಿದ್ದಲ್ಲಿ, ಅದಕ್ಕಾಗಿ ಒತ್ತಡ ನಿವಾರಕ ಔಷಧಿ ಸೇವಿಸುವ ರೋಗಿಗಳ ಬಗ್ಗೆ ವಿಶೇಷ ನಿಗಾ ಮತ್ತು ಕಾಳಜಿ ವಹಿಸಬೇಕು. ಇಂತಹ ರೋಗಿಗಳಿಗೆ ಔಷಧಿ ನೀಡುವಾಗ ಬಹಳ ಹುಷಾರಾಗಿರಬೇಕು. ನಾವು ನೀಡುವ ಔಷಧಿಗಳ ಜೊತೆಗೆ ಅವರು ಸೇವಿಸುವ ಔಷಧಿಗಳು ಒಂದಕ್ಕೊಂದು ವಿರುದ್ಧವಾಗಿ ವರ್ತಿಸಿ ಸಂಕೀರ್ಣ ಸಮಸ್ಯೆಗಳನ್ನು ಸೃಷ್ಟಿಸುವ ಸಾಧ್ಯತೆ ಇದೆ. ಅದೇ ರೀತಿ ಇಂತಹ ರೋಗಿಗಳಿಗೆ ಅಡ್ರಿನಲೀನ್ ಇರುವ ಅರಿವಳಿಕೆ ಔಷಧಿ ನೀಡುವ ಮೊದಲು ಮನೋವೈದ್ಯರ ಅನುಮತಿ ಮತ್ತು ಆಪ್ತ ಸಮಾಲೋಚನೆ ಅತೀ ಅಗತ್ಯವಾಗಿರುತ್ತದೆ.

ಚಿಕಿತ್ಸೆ ನೀಡುವಾಗ ರೋಗಿಗಳ ರೋಗದ ಚರಿತ್ರೆ ಮತ್ತು ಹಿನ್ನಲೆಯನ್ನು ಕೂಲಂಕಷವಾಗಿ ಅರಿಯಬೇಕು. ಹಾಗಾದಲ್ಲಿ ಮಾತ್ರ ರೋಗಿಗಳಿಗೆ ಪರಿಪೂರ್ಣ ಚಿಕಿತ್ಸೆಯನ್ನು ನೀಡಲು ಸಾಧ್ಯ. ಚಿಕಿತ್ಸೆ ನೀಡುವ ಮೊದಲು ಕನಿಷ್ಠ ಹತ್ತು ನಿಮಿಷ ರೋಗಿಗಳ ಜೊತೆ ಮಾತನಾಡಿ ರೋಗಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಚಿಕಿತ್ಸೆ ನೀಡಿದಲ್ಲಿ ಮಾತ್ರ ದಂತ ಚಿಕಿತ್ಸೆ ಫಲಕಾರಿಯಾಗುತ್ತದೆ.